**OS 281/2017 PW.01**

<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 03.02.2026.</u>

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಕೆ ವೈ ಎನ್ ವಕೀಲರಿಂದಃ</u>

ನಾನು ಚಕ್ಕುಬಂದಿಯ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಜಮೀನನ್ನು ನನಗೆ ಗ್ರಾಂಟ್ ಮಾಡುವ ಸಮಯಕ್ಕೆ ತಯಾರಿಸಲಾದ ನಕ್ಷೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ.

2. ಪ್ರತಿವಾದಿ ಉದ್ಯಾನವನ್ನು ನಿರ್ಮಿಸುವ ಪೂರ್ವದಲ್ಲಿ ಸ್ಥಳಕ್ಕೆ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿಯವರು ಭೇಟಿ ನೀಡಿ ಪರಿಶೀಲಿಸಿ ಮಹಜರನ್ನು ತಯಾರಿಸಿದ್ದರು ಎಂದರೆ ಸರಿಯಲ್ಲ. ಸದರಿ ಮಹಜರಿಗೆ ಗ್ರಾಮಸ್ಥರು ಸಹಿ ಮಾಡಿದ್ದು ನಾನು ಸಹ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಗೆ ಮಹಜರ್ ನಕಲನ್ನು ತೋರಿಸಲಾಗಿ ಅದರಲ್ಲಿ ನನ್ನ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಪೌರಾಡಳಿತ ನಿರ್ದೇಶನಾಲಯದಿಂದ ಅನುಮತಿ ಪಡೆದು ಪ್ರತಿವಾದಿ ಉದ್ಯಾನವನ್ನು ನಿರ್ಮಿಸಿರುತ್ತಾರೆಂದರೆ ಸರಿ. ರಾಜಸ್ವ ನಿರೀಕ್ಷಕರು ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿ, ಸ್ಥಳವನ್ನು ಗುರುತಿಸಿದ ನಂತರ ನಿಯಮಾನುಸಾರ ಪ್ರತಿವಾದಿ ಉದ್ಯಾನವನವನ್ನು ನಿರ್ಮಿಸಿರುತ್ತಾರೆಂದರೆ ಸರಿಯಲ್ಲ. ಸ್ಥಳ ಪರಿಶೀಲನೆ ಕಾಲಕ್ಕೆ ನಾನು ಹಾಜರಿದ್ದು ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಹೇಳುವಂತೆ ದಾವಾ ಸ್ವತ್ತಿಗೆ 1 ನೇ ಪ್ರತಿವಾದಿ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಗರಸಭೆಗೆ ಸೇರಿದ ಜಾಗವನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ಜಮೀನು ನನಗೆ ಮಂಜೂರಾದ ನಂತರ, ಸದರಿ ಜಮೀನನ್ನು ಅದ್ದುಬಸ್ತು ಮಾಡಿಸಿರುತ್ತೇನೆ. ಸದರಿ ಅದ್ದುಬಸ್ತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ದಾಖಲೆಗಳನ್ನು ನಮ್ಮ ವಕೀಲರು ಕೇಳದೇ ಇರುವುದರಿಂದ ನಾನು ಹಾಜರು ಪಡಿಸಿರುವುದಿಲ್ಲ. ನಾನೇ 1 ನೇ ಪ್ರತಿವಾದಿಗೆ ಸೇರಿದ ಸಾರ್ವಜನಿಕ ಸ್ವತ್ತಿಗೆ ತೊಂದರೆ ನೀಡಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.